3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No. 390/2019**

ಪ್ರಾಸಾ 3

ಚಾಸಾ.1

| | |
|---|---|
| ಹೆಸರು | ನಾಗಮ್ಮ |
| ಗಂಡನ ಹೆಸರು | ನರಸಿಂಹಯ್ಯ |
| ವಯಸ್ಸು | 35 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಸೀನಪ್ಪನಹಳ್ಳಿ |

ಸಾಕ್ಷಿಯನ್ನು ದಿನಾಂಕ 14.07.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ** (ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ)

1) ನಾನು ಪರಿಶಿಷ್ಟ ಜಾತಿಯ ಆದಿಕರ್ನಾಟಕ ಜನಾಂಗಕ್ಕೆ ಸೇರಿರುತ್ತೇನೆ. ಆರೋಪಿ ತಿಗಳ ಜನಾಂಗಕ್ಕೆ ಸೇರಿರುತ್ತಾನೆ. ಆತನನ್ನು ನೋಡಿದರೆ ಗುರುತಿಸುತ್ತೇನೆ. ಸುಮಾರು 8 ವರ್ಷಗಳ ಹಿಂದೆ ರಾತ್ರಿ 8 ಗಂಟೆಗೆ ನಾನು ಮನೆಯ ಒಳಗೆ ಇದ್ದಾಗ ಆರೋಪಿಯು ಮುಸುರೆ ತಂದು ನಮ್ಮ ಮನೆಯ ಮುಂದೆ ಚೆಲ್ಲಿರುತ್ತಾನೆ. ಆಗ ನಾನು ಪ್ರಶ್ನಿಸಿರುತ್ತೇನೆ. ಆಗ ಆರೋಪಿಯು ನನ್ನ ಇಷ್ಟ , ಎಲ್ಲಿಯಾದರೂ ಚೆಲ್ಲುತ್ತೇನೆ ಎಂದು ಹೇಳಿ ನನ್ನನ್ನು ಹಿಡಿದುಕೊಂಡು ಮಚ್ಚಿನಿಂದ ತಲೆಗೆ ಹೊಡೆದಿರುತ್ತಾನೆ. ಆಗ ನಾನು ಕಿರುಚಿಕೊಂಡಿರುತ್ತೇನೆ. ಗಲಾಟೆಯನ್ನು ಹನುಮಕ್ಕರವರು ನೋಡಿರುತ್ತಾರೆ. ನಂತರ ಗೋವಿಂದರಾಜುರವರು ಬಂದು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ

ಚಿಕಿತ್ಸೆಯನ್ನು ಕೊಡಿಸಿರುತ್ತಾರೆ. ಆರೋಪಿಯು ಮಚ್ಚನ್ನು ಸ್ಥಳದಲ್ಲಿಯೇ ಬಿಸಾಕಿ ಓಡಿ ಹೋಗಿರುತ್ತಾನೆ. ಮಚ್ಚನ್ನು ನೋಡಿದರೆ ಗುರುತಿಸುತ್ತೇನೆ. ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡು ಹೆಬ್ಬೂರು ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ದೂರನ್ನು ನಿಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು.

2) ದೂರನ್ನು ಕೊಟ್ಟ ಮಾರನೇ ದಿನ ಪೊಲೀಸರು ಸ್ಥಳಕ್ಕೆ ಬಂದು ಪಂಚನಾಮೆಯನ್ನು ಮಾಡಿಕೊಂಡಿರುತ್ತಾರೆ. ಪಂಚನಾಮೆಯನ್ನು ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರಿದ ಮುಖ್ಯವಿಚಾರಣೆಗಾಗಿ ಕಾಲಾವಕಾಶವನ್ನುಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ